ಇವೆ, ಅದನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ಸಚಿವ ಸಂಪುಟದ ಮುಂದೆ ತರಬೇಕಾಗುತ್ತದೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ಬೇರೆ ರಾಜ್ಯಗಳಲ್ಲಿ ಖಾಯಂ ಮಾಡಿರುವಾಗ ಅದನ್ನು ತಾವು ಪರಿಶೀಲನೆ ಮಾಡಿ ಏಕೆ ಮಾಡಬಾರದು?

ಶ್ರೀ ಪ್ರಭಾಕರ ಎಸ್ ರಾಣೆ:ಅಧ್ಯಕ್ಷರೇ, ಇದನ್ನು ನಾವು ಸಂಪೂರ್ಣವಾಗಿ ತಳ್ಳಿಹಾಕುತ್ತಿಲ್ಲ. ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಅನೇಕ ವರ್ಷಗಳಿಂದ ಏನು ಕಾರ್ಯ ನಿರ್ವಹಿಸುತ್ತಿದ್ದಾರೆ? ಇವರುಗಳ ಬಗ್ಗೆ ಸಂಪೂರ್ಣವಾದ ಸಹಾನುಭೂತಿ ಸರ್ಕಾರಕ್ಕಿದೆ. ಅದನ್ನು ಆದಷ್ಟು ಬೇಗನೆ ಪರಿಹಾರ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿನ ಉರ್ದು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 108(454)

ಶ್ರೀ ಕರಿಯಣ್ಣ

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಉರ್ದು ಪ್ರಾಥಮಿಕ ಶಾಲೆ ಹಾಗೂ ಉರ್ದು ಪ್ರೌಢ ಶಾಲೆಗಳು ಇರುವುದು;

ಆ) ಈ ಎಲ್ಲಾ ಉರ್ದು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಉರ್ದು ಹಾಗೂ ಕನ್ನಡದ ಉಪಾಧ್ಯಾಯರುಗಳನ್ನು ನೇಮಕ ಮಾಡಲಾಗುವುದೇ;

ಇ) ಉರ್ದು ಉಪಾಧ್ಯಾಯರನ್ನು ಒಂದು ಪಕ್ಷ ನೇಮಕ ಮಾಡದಿದ್ದಲ್ಲಿ ಉರ್ದು ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ತೆರೆಯಲಾಗಿದೆ;

ಈ) ಮೇಲ್ಕಂಡ ಪ್ರಾಥಮಿಕ ಹಾಗೂ ಪ್ರೌಢ ಉರ್ದು ಶಾಲೆಗಳಿಗೆ ಖಾಯಂ ಉಪಾಧ್ಯಾಯರ ಹುದ್ದೆಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

ಉರ್ದು ಪ್ರಾಥಮಿಕ ಶಾಲೆಗಳು : 206

ಉರ್ದು ಪ್ರೌಢ ಶಾಲೆಗಳು : 01

ರಿಕ್ತ ಸ್ಥಾನಗಳಲ್ಲಿ ಶೀಘ್ರವಾಗಿ ನೇಮಕಾತಿ ಮಾಡಲಾಗುವುದು.

-ಮೇಲಿನಂತೆ-

ಹೌದು.

ಶ್ರೀ ಕರಿಯಣ್ಣ:ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಉರ್ದು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಇದೆಯೆಂದು ಕೇಳಿದ್ದೆ. ಉತ್ತರದಲ್ಲಿ 206 ಉರ್ದು ಪ್ರಾಥಮಿಕ ಶಾಲೆಗಳು ಮತ್ತು ಒಂದೇ ಒಂದು ಉರ್ದು ಪ್ರೌಢ ಶಾಲೆ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಅವರ ಇಲಾಖೆಗೆ ಇದು ಅರ್ಥವಾಗಿದೆಯೋ ಅಥವಾ ಇಲ್ಲವೋ? ಶಿವಮೊಗ್ಗದಲ್ಲೂ ಉರ್ದು ಪ್ರೌಢ ಶಾಲೆ ಇದೆ, ಚೆನ್ನಗಿರಿಯಲ್ಲಿ ಉರ್ದು ಪ್ರೌಢ ಶಾಲೆಗಳು 3 ಇವೆ, ಹೊನ್ನಾಳಿಯಲ್ಲಿ ಉರ್ದು ಪ್ರೌಢ ಶಾಲೆ ಇದೆ. ಆದರೆ ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಒಂದೇ ಒಂದು ಉರ್ದು ಪ್ರೌಢ ಶಾಲೆ ಇದೆ ಎಂದು ಉತ್ತರ

ಕೊಟ್ಟಿದ್ದಾರೆ. ಆಮೇಲೆ ಮತ್ತೊಂದು ವಿಚಾರ ಅಂದರೆ, ಈ ಎಲ್ಲಾ ಉರ್ದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಉಪಾಧ್ಯಾಯರುಗಳನ್ನು ನೀವು ನೇಮಕ ಮಾಡಿದ್ದೀರಾ ಎಂದು ನಾನು ಪ್ರಶ್ನೆ ಕೇಳಿದ್ದೆ. ಆದರೆ ನೇಮಕ ಮಾಡಲಾಗುವುದೇ ಎಂದು ಅವರೇ ಸೃಷ್ಟಿ ಮಾಡಿಕೊಂಡು ನೇಮಕ ಮಾಡಿರುವುದನ್ನು ಹೇಳಲೇ ಇಲ್ಲ. ರಿಕ್ತ ಆಧಾರದ ಮೇಲೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಆದರೆ ಎಷ್ಟು ಜನರನ್ನು ನೇಮಕ ಮಾಡಿದ್ದೀರಿ ಎಷ್ಟು ಕೊರತೆ ಇದೆ ಎಂದು ಕೇಳಿದ್ದಕ್ಕೆ ಅದರ ವಿವರಗಳನ್ನು ಅವರು ತಿಳಿಸಿಲ್ಲ. ಮೂರನೇದಾಗಿ ಆಕಸ್ಮಾತ್ತಾಗಿ ಉರ್ದು ಉಪಾಧ್ಯಾಯರು ಇಲ್ಲದೇ ಹೋದರೆ ಅಲ್ಲಿ ಏನಾದರೂ ನೇಮಕ ಮಾಡಿಕೊಳ್ಳುತ್ತೀರಾ ಎಂದು ಕೇಳಿದ್ದಕ್ಕೂ ಉತ್ತರವಿಲ್ಲ. ಒಂದು ಪಕ್ಷ ಉರ್ದು ಶಾಲೆಗಳನ್ನು ತೆರೆದಿದ್ದು, ಉಪಾಧ್ಯಾಯರುಗಳನ್ನು ಕೊಡಲು ನಿಮ್ಮ ಕಡೆಯಿಂದ ಆಗದೇ ಹೋಗಿದ್ದರೆ, ಉರ್ದುಶಾಲೆಗಳನ್ನು ಬಂದ್ ಮಾಡುತ್ತೀರಾ ಎಂದು ಕೇಳಿದ್ದಕ್ಕೂ ಉತ್ತರವನ್ನು ಕೊಟ್ಟಿಲ್ಲ. ಹೀಗಾಗಿ ನನ್ನ ಪ್ರಶ್ನೆಗಳಿಗೆ ಅಪೂರ್ಣವಾದ ಉತ್ತರವನ್ನು ಅವರು ಒದಗಿಸಿದ್ದಾರೆ. ಅವರ ಇಲಾಖೆಯಲ್ಲಿ ಸಮರ್ಪಕವಾಗಿ ಉತ್ತರವನ್ನು ಒದಗಿಸುವ ಸೌಜನ್ಯವನ್ನು ತೋರಿಸಿಲ್ಲ. ಆದ್ದರಿಂದ ಒಟ್ಟು ಎಷ್ಟು ಪ್ರೌಢಶಾಲೆಗಳು ಇದ್ದಾವೆ, ಎಷ್ಟು ಪ್ರಾಥಮಿಕ ಶಾಲೆಗಳಿದ್ದಾವೆ? ಉರ್ದು ಉಪಾಧ್ಯಾಯರುಗಳ ಕೊರತೆಯು ಎಷ್ಟು ಇದೆ ಎಂಬುದನ್ನು ಹೇಳ ಬೇಕು. ಇರುವ ಕೊರತೆಯನ್ನು ಯಾವಾಗ ತುಂಬಿಸುತ್ತೀರಿ ಎಂಬುದನ್ನು ಸಹ ತಿಳಿಸಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೇ, ನನ್ನ ಮುಂದೆ ಬಂದಿರತಕ್ಕಂಥ ಉತ್ತರದ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿ 206 ಉರ್ದುಪ್ರಾಥಮಿಕ ಶಾಲೆಗಳಿವೆ, ಹಾಗೆಯೇ ಸರಕಾರಿ ಉರ್ದುಪ್ರಾಥಮಿಕ ಶಾಲೆ ಕೂಡ ಒಂದು ಇದೆ ಎಂದು ಕಾಣುತ್ತದೆ.

ಶ್ರೀ ಕರಿಯಣ್ಣ:- ಸರಕಾರಿ ಉರ್ದುಶಾಲೆಯು ಚೆನ್ನಗಿರಿ ಮತ್ತು ನಲ್ಲೂರಿನಲ್ಲಿದೆ. ಶಿವಮೊಗ್ಗದಲ್ಲಿಯೂ ಇದೆ. ಹಾಗೆಯೇ ಶಿಕಾರಿಪುರದಲ್ಲಿಯೂ ಇದೆ. ತಾವು ಹೇಳುತ್ತಿರುವುದು ನಮಗೆ ಅರ್ಥವಾಗುತ್ತಿಲ್ಲವಲ್ಲ?ಹಾಗಾದರೆ ನಿಮ್ಮ ಇಲಾಖೆಯಲ್ಲಿ ನಿಮಗೆ ಹಿಡಿತ ಇಲ್ಲವೋ?ಅಥವಾ ಅಧಿಕಾರಿಗಳು ನಿಮಗೆ ಸರಿಯಾದ ಮಾಹಿತಿಗಳನ್ನು ಕೊಡುತ್ತಿಲ್ಲವೋ ಎಂಬುದನ್ನು ಹೇಳಿ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ:- ಇದರ ಬಗ್ಗೆ ತಮಗೆ ನಾನು ಕಾಗದ ಬರೆಯುತ್ತೇನೆ. ಈಗ ತಾವುಗಳು...

ಶ್ರೀ ಕರಿಯಣ್ಣ:- ನನಗೆ ಕಾಗದದ ಅವಶ್ಯಕತೆಯಿಲ್ಲ. ನಮ್ಮಲ್ಲಿ ಪ್ರಾರಂಭ ಮಾಡಿದ ಉರ್ದುಶಾಲೆಗಳಲ್ಲಿ ಒಬ್ಬರೂ ಸಹ ಉಪಾಧ್ಯಾಯರುಗಳು ಇಲ್ಲ. ನಲ್ಲೂರಿನಲ್ಲಿ 1977ರಲ್ಲಿ ಉರ್ದು ಶಾಲೆ ಪ್ರಾರಂಭವಾಗಿದ್ದರೂ ಇದುವರೆಗೂ ಒಬ್ಬರನ್ನೂ ನೇಮಕ ಮಾಡಿಲ್ಲ. ಎಲ್ಲಾ ಕಡೆಗಳಲ್ಲಿಯೂ ಖಾಲಿ ಇರುವ ಜಾಗಗಳನ್ನು ತುಂಬ ಬೇಕು. ಇಲ್ಲವಾದರೆ ಉರ್ದು ಶಾಲೆಗಳನ್ನು ತೆಗೆದು ಬಿಡಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, ಈ ಉತ್ತರವು ಸಮರ್ಪಕವಾಗಿಲ್ಲ ಎಂದು ಹೇಳುವುದಾದರೆ ಇದನ್ನು ತಾವು ತಡೆಹಿಡಿಯಿರಿ ಮುಂದಿನ ಸಲ ನಾನು ಸರಿಯಾದ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು:- ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ, ತಾವು ಹೀಗೆ ನಮ್ಮ ಪ್ರಶ್ನೆಗಳನ್ನು ತಡೆಹಿಡಿದರೆ ನಾವು ಊರಿಗೆ ಹೋಗುವ ಹಾಗಿಲ್ಲದಂತಾಗುತ್ತದೆ. ಇನ್ನು ಮೂರು ದಿವಸಗಳಲ್ಲಿ ಸಭೆಯು ಮುಗಿದು

ಹೋಗುತ್ತದೆ, ಇವರು ಉತ್ತರ ಹೇಳುವುದಾದರೂ ಯಾವಾಗ?

ಅಧ್ಯಕ್ಷರು:- ತಾವು ಕುಳಿತುಕೊಳ್ಳಿ.

ಅಧ್ಯಕ್ಷರು:- ಮಂತ್ರಿಗಳು ಊರಲ್ಲಿ ಇಲ್ಲ, ಅವರು ಬರುವುದಕ್ಕೆ ಆಗುವುದಿಲ್ಲವಾದ ಕಾರಣ ಪ್ರಶ್ನೆ ಸಂಖ್ಯೆ : 109(629)ನ್ನು ತಡೆಹಿಡಿಯಲಾಗಿದೆ.

ಶ್ರೀ ಎಂ.ನಾರಾಯಣಸ್ವಾಮಿ:- ಮಾನ್ಯ ಅಧ್ಯಕ್ಷರೇ, ನಾನು ಈ ಆಸ್ಪತ್ರೆಯ ಬಗ್ಗೆ ಸುಮಾರು ಸಾರಿ ಪ್ರಶ್ನೆ ಕೇಳಿದಾಗಲೂ ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಇದು ನಾಲ್ಕನೇ ಬಾರಿ ನಾನು ಕೇಳುತ್ತಿರುವುದು. ಪ್ರತಿಸಾರಿಯೂ ಕೂಡ ಹೀಗೇ ಆಗುತ್ತಾ ಇದೆ. ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಹೀಗೆ ಆಗಿರುವುದರಿಂದ ತೊಂದರೆಯಾಗುತ್ತಾ ಇದೆ. ಮೊದಲು ಅಧಿಕಾರಿಗಳು ವೀರೇಂದ್ರ ಪಾಟೀಲರ ಸರಕಾರದಲ್ಲಿ ಸರಿಯಾಗಿ ಉತ್ತರವನ್ನು ಕೊಡುತ್ತಾ ಇದ್ದರು. ಆನಂತರ ಯಾವ ಪ್ರಶ್ನೆಗೂ ಸರಿಯಾದ ಉತ್ತರವು ನಮಗೆ ದೊರೆಯುತ್ತಾ ಇಲ್ಲ.

ಅಧ್ಯಕ್ಷರು:- ಮಂತ್ರಿಗಳು ಇಲ್ಲ; ಪರಿಶೀಲನೆ ಮಾಡುತ್ತಾರೆ ಈಗ

ಶ್ರೀ ಬಸವರಾಜ ರಾಯರೆಡ್ಡಿಯವರು ಶ್ರೀ ಬಿ.ಹಂಪನಗೌಡರವರ ಪರವಾಗಿ ಕೇಳಬಹುದು.

ಪ್ರಶ್ನೆ ಕ್ರಮಾಂಕ: 110(516) ಅನ್ನು

ವಿಷಯ:- ವೃತ್ತಿಪರ ಶಿಕ್ಷಣದ ನಿಯಮಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ110(516)

ಶ್ರೀ ಹಂಪನಗೌಡ.ಬಿ. (ಸಿಂಧನೂರು)

ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ವೃತ್ತಿ ಪರ ಶಿಕ್ಷಣದ ಬಗ್ಗೆ ಸರ್ಕಾರ ನಿಯಮಗಳನ್ನೇನಾದರೂ ಮಾಡಿದೆಯೇ?

ಆ) ಮಾಡಿದ್ದರೆ ಯಾವ ಆಧಾರದ ಮೇಲೆ ಈ ನಿಯಮಗಳನ್ನು ಮಾಡಲಾಗಿದೆ?

ಇ) ವೃತ್ತಿಪರ ಶಿಕ್ಷಣದಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಡೆಂಟಲ್ ಪರೀಕ್ಷೆಗಳಿಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಈ) ಅದರಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಉ) ಹೈದ್ರಾಬಾದ್ ಕರ್ನಾಟಕ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣದ ಪರೀಕ್ಷೆಯಲ್ಲಿ ವಿಶೇಷ ಸೌಲಭ್ಯವೇನಾದರೂ ಸರ್ಕಾರದವರು ಒದಗಿಸುವರೆ?

ಶ್ರೀ ಎಸ್.ಎಂ. ಯಾಹ್ಯಾ

(ಉನ್ನತ ಶಿಕ್ಷಣ ವಕ್ಫ್ ಮಂತ್ರಿಗಳು)

ಹೌದು.

ಉನ್ನಿಕೃಷ್ಣನ್, ಜೆ.ಪಿ. ಮತ್ತು ಇತರರು ಹೂಡಿದ್ದ ರಿಟ್ ಅರ್ಜಿಗಳ ಮೇಲೆ ಸರ್ವೋಚ್ಚ ನ್ಯಾಯಾಲಯವು ದಿನಾಂಕ 4-2-93ರಂದು ನೀಡಿರುವ ತೀರ್ಪಿಗೆ ಅನುಸಾರವಾಗಿ ನಿಯಮಗಳನ್ನು ರೂಪಿಸಲಾಗಿದೆ.

ವೃತ್ತಿಪರ ಶಿಕ್ಷಣದಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಡೆಂಟಲ್ ಪರೀಕ್ಷೆಗಳಿಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಕೆಳಕಂಡಂತಿದೆ.